ಎನ್ನಬಹುದು. ಕನ್ನಡದಲ್ಲಿ ಈ ಹೊತ್ತು ಕೆನೆಪದರದ ಶಿಷ್ಟ ಸಾಹಿತ್ಯದ ಗ್ರಹಿಕೆ ಒಂದು ಕಡೆ ಇದ್ದರೆ ಇನ್ನೊಂದೆಡೆ ಚಳವಳಿ, ಐಡಿಯಾಲಾಜಿಯನ್ನೇ ಕೇಂದ್ರವಾಗಿಟ್ಟಕೊಂಡ ಗ್ರಹಿಕೆ ಇದೆ. ಇವು ಸಾಹಿತ್ಯವನ್ನು ಸಮನ್ವಯಗೊಳಿಸಿಕೊಳ್ಳುವ ರೀತಿ ಗಮನಿಸಿದರೆ ಸಾಹಿತ್ಯದ ಶಿಷ್ಟತೆಯನ್ನು ಒಡೆದುಕೊಳ್ಳುವುದು ಮತ್ತು ಜನಪ್ರಿಯ ಮಾದರಿಗಳನ್ನು ಶಿಷ್ಟಗೊಳಿಸುವ ನಿಟ್ಟಿನಲ್ಲಿವೆ. ಇದರಿಂದ ಸಾಹಿತ್ಯದ ಪ್ರಕಾರಗಳ ಸಂರಚನೆ ಕೂಡ ಬದಲಾಗುತ್ತಿರುವುದನ್ನು ಓದುಗರು ಗಮನಿಸಿರಬಹುದು. ಇಂದು ಕಾವ್ಯವನ್ನು ವಿಪುಲವಾಗಿ ಬರೆಯಲ್ಪಡುತ್ತಿದ್ದರೂ ಅದು ಇಂದಿನ ತಲೆಮಾರಿನ ಅಭಿವ್ಯಕ್ತಿಯಲ್ಲ ಎಂದೇ ಹೇಳಬಹುದು. ಇಂದು ಕನ್ನಡದಲ್ಲಿ ಫಿಕ್ಷನ್ ಹಾಗೂ ನಾನ್–ಫಿಕ್ಷನ್ ಬರವಣಿಗೆಯ ಬಗ್ಗೆ ಒಂದು ಮೋಹ ಬೆಳೆಯುತ್ತಿದೆ. ಇಂದು ಬಹುತೇಕವಾಗಿ ಸಾಹಿತ್ಯಕವಾಗಿ ಗೆದ್ದ ಕೃತಿಗಳು ಕಾದಂಬರಿಗಳು, ಆತ್ಮಕಥೆಗಳು ಅಥವಾ ಅನುಭವ ಕಥನಗಳು. ವಾಸ್ತವವನ್ನು ಮರುಸೃಷ್ಟಿಸುವ ಆತ್ಮಕಥೆಗಳು, ಅನುಭವ ಕಥನಗಳು, ಪ್ರಬಂಧಗಳು ಇಂದು ಹೆಚ್ಚಿನ ಒಲವನ್ನು ಗಳಿಸುತ್ತಿರುವುದು, ಸಾಹಿತ್ಯದ ಪ್ರಕಾರಗಳು ತಮ್ಮ ನಿಶ್ಚಿತ ಸ್ವರೂಪಗಳನ್ನು ಕಳಚಿಕೊಳ್ಳುತ್ತಾ ಹೊಸ ಅವತಾರಗಳಲ್ಲಿ ಬರುತ್ತಿರುವುದು ಸಹ ಹೊಸ ಬೆಳವಣಿಗೆ. ಸಾಂಪ್ರದಾಯಿಕ ಲೇಖನ, ಹಾಸ್ಯ ಲೇಖನ ಎಂದೆಲ್ಲಾ ಲೇಬಲ್ಲುಗಳಡಿಯಲ್ಲಿ ಸಾಹಿತ್ಯ ಓದುವುದು ಕಡಿಮೆಯಾಗಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ವೈದೇಹಿಯವರ ಅನೇಕ ಪ್ರಬಂಧಗಳು ಕಥೆಗಳಂತೆ ಇವೆ. ವಸುಧೇಂದ್ರರ ಸಂಕಲಗಳಲ್ಲಿ ಕಥೆ ಮತ್ತು ಪ್ರಬಂಧ ಅನೇಕ ಬಾರಿ ಒಂದೇ ಕಡೆ ಸಂಕಲಿತವಾಗಿರುತ್ತವೆ. ಈ ಬೆಳವಣಿಗೆಗಳು ಲೇಖಕರು ಹೊಸದೇನನ್ನೋ ಕಂಡುಕೊಳ್ಳುವ ಹಂತದಲ್ಲಿ ಕ್ರಿಯಾಶೀಲರಾಗಿದ್ದಾರೆ ಎನ್ನುವುದನ್ನು ಸೂಚಿಸುತ್ತಿವೆ.

> ಸಮಗ್ರ ಬದುಕಿನ ಗ್ರಹಿಕೆಯ ಕ್ರಮ ಇಲ್ಲಿ ಉದ್ದೇಶಪೂರ್ವಕವಾಗಿಯೇ ಹಿನ್ನೆಲೆಗೆ ಸರಿಯುತ್ತದೆ. ಒಂದು ಅಸ್ಮಿತೆಯ ಮೂಲಕ ಲೋಕದ ಅನುಭವಗಳನ್ನು ಗ್ರಹಿಸುವಾಗ ಲೋಕದ ಅನುಭವಗಳೊಂದಿಗೆ ತನ್ನ ಸ್ವ ಅನುಭವವನ್ನು ತುಲನೆ ಮಾಡುತ್ತಾ, ತನ್ನ ಲೋಕದೃಷ್ಟಿಯನ್ನು ಮಂಡಿಸುವುದು ಮುಖ್ಯವಾಗುತ್ತದೆ.

ಈಗಿನ ಜಾಗತೀಕರಣದ ಕಾಲವು ಕೆಟ್ಟ ಕಾಲವೆಂದೇ ಬಿಂಬಿತವಾಗಿದೆ. ಈಗಿನ ಪಾಪ, ಪ್ರಾಯಶ್ಚಿತ್ತಗಳಿಗೆ ದನಿಗೊಡಲು ಕನ್ನಡದ ಲೇಖಕರು ಸೋತಿದ್ದಾರೆ ಎನ್ನುವ ಅಭಿಪ್ರಾಯವಿದೆ. ಹೀಗೆ ಸಾರಾಸಗಟಾಗಿ ತಳ್ಳಿ ಹಾಕುವುದು ಉಚಿತ ಎಂದೆನಿಸುವುದಿಲ್ಲ. ಈಗಾಗಲೇ ವಿವರಿಸಿದಂತೆ ಸಾಹಿತ್ಯದ ಅಭಿವ್ಯಕ್ತಿಯು ಪಲ್ಲಟಗಳನ್ನು ಕಾಣುತ್ತಿರುವ ಕಾಲಮಾನದಲ್ಲಿ ಸಾಹಿತ್ಯವನ್ನು ಆತ್ಯಂತಿಕವಾದ ಋಜುಶೋಧದ ಮಾರ್ಗ ಎಂಬ ಭಾವನೆ ನಿಚ್ಚಳವಾಗಿಲ್ಲ. ಹಾಗೆಂದೇ ಆಧುನಿಕೋತ್ತರ ಮನೋಭಾವದ ಧೋರಣೆಗಳನ್ನು ಇಂದಿನ ಕನ್ನಡ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ. ಮೇಲಾಗಿ ಇಂದು ರಚನೆಗಿಂತ ನಿರಚನೆಯ ಬಗೆಗೆ ಆಸಕ್ತಿ ಹೆಚ್ಚು. ಆದಕಾರಣ ಸಾಂಪ್ರದಾಯಿಕ ಮಾದರಿಗಳನ್ನೆಲ್ಲ ಒಡೆದುಕೊಳ್ಳುವುದೇ ಅಭಿವ್ಯಕ್ತಿಯ ಆದ್ಯತೆಯಾಗಿದೆ. ಇದನ್ನು ಫಾರ್ಸ್ ರೂಪದಲ್ಲಿ, ಸೆಟಾನಿಕ್ ಹಾಗೂ ಕಟುವಾಗಿ ಭಾಷೆ ಬಳಸಿ ರುಚಿಯನ್ನು ಹುಟ್ಟಿಸುವ ಕಡೆ ಆಸಕ್ತಿ ಬೆಳೆದಿದೆ. ಈ ಶತಮಾನದ ಮೊದಲಿಗೇ ಗಾಂಧಿ ನಿರಚನೆಯಾದರು. ಜಾನಪದ ಇತಿಹಾಸದ ದೃಷ್ಟಿಯಿಂದ ಇತಿಹಾಸ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸಾಹಿತ್ಯದ ವಸ್ತು, ಪಾತ್ರಗಳು ಬದಲಾಗತೊಡಗಿವೆ. ರಮೇಶಬಾಬು